# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 08-11-2022

## ಗಾಂಧಿಗಂಜ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 168/2022 ಕಲಂ 457, 380 ಐಪಿಸಿ :-

ದಿನಾಂಕ 07/11/2022 ರಂದು 1700 ಗಂಟೆಗೆ ಫಿರ್ಯಾದಿ ಶ್ರೀ ವಿಠಲರೆಡ್ಡಿ ತಂದೆ ತುಕ್ಕಾರೆಡ್ಡಿ ವಯಸ್ಸು: 53ವರ್ಷ ಜಾತಿ: ರೆಡ್ಡಿ ಉದ್ಯೋಗ: ಕೆಎಸ್ಆರ್‌ಟಿಸಿಯಲ್ಲಿ ಕಂಡಕ್ಟರ್ ಕೆಲಸ ಸಾ: ಮನೆ ಸಂ. 12-3-141, ಗುಮ್ಮೆ ಕಾಲೋನಿ ಬೀದರ ರವರು ಠಾಣೆಗೆ ಹಾಜರಾ ದೂರು ನೀಡಿದರ ಸಾರಾಂಶವೆನೆಂದರೆ ಫಿರ್ಯಾದಿಯು ಸುಮಾರು 4 ದಿವಸಗಳ ಹಿಂದೆ ತನ್ನ ಕುಟುಂಬದೊAದಿಗೆ ಸಂಬAಧಿಕರೊಬ್ಬರ ಮನೆಯ ಪೂಜೆ ಇದ್ದುದ್ದರಿಂದ ಮಂಗಲಗಿ ಗ್ರಾಮಕ್ಕೆ ಹೋಗಿದ್ದು ಇರುತ್ತದೆ. ಮತ್ತು ದಿನಾಂಕ: 06/11/2022 ರಂದು ರಾತ್ರಿ 9-00 ಗಂಟೆ ಸುಮಾರಿಗೆ ರಾತ್ರಿ ಕರ್ತವ್ಯ ಇದ್ದುದ್ದರಿಂದ ಮನೆಯ ಬಾಗಿಲು ಮುಚ್ಚಿ ಬೀಗ ಹಾಕಿಕೊಂಡು ಕರ್ತವ್ಯಕ್ಕೆ ಹೋಗಿ ಕರ್ತವ್ಯ ಮುಗಿಸಿಕೊಂಡು ದಿನಾಂಕ: 07/11/2022 ರಂದು ಬೆಳಿಗ್ಗೆ 6-30 ಗಂಟೆ ಸುಮಾರಿಗೆ ಮನೆಗೆ ಹೋದಾಗ ಮನೆಯ ಬಾಗಿಲಿಗೆ ಹಾಕಿದ ಬೀಗ ಮುರಿದಿದ್ದು, ಬಾಗಿಲು ತೆರೆದಿದ್ದು ನೋಡಿ ಘಾಬರಿಗೊಂಡು ಮನೆಯ ಒಳಗಡೆ ಹೋಗಿ ನೋಡಲು ಮನೆಯಲ್ಲಿನ ಎಲ್ಲಾ ಸಾಮಾನುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಬೆಡ್ ರೂಮಿನಲ್ಲಿರುವ ಕಬ್ಬಿಣದ ಅಲಮಾರಾ ನೋಡಲು ಅದರ ಒಳಗಡೆ ಲಾಕರ್‌ನ್ನು ಮುರಿದಿದ್ದು ಒಳಗಡೆ ನೋಡಲು ಅಲಮಾರಾದ ಲಾಕರ್‌ದಲ್ಲಿ ಇಟ್ಟಿದ್ದ 1] ಬಂಗಾರದ ನೆಕಲೆಸ್ ಅಂ. 15 ಗ್ರಾಂ. ಅಂ.ಕೀ. 50,000/-ರೂ. 2] ಬಂಗಾರದ ಮೂರು ಉಂಗುರಗಳು ಅಂ. 15 ಗ್ರಾಂ. ಅಂ.ಕೀ. 50,000/-ರೂ. 3] ಬಂಗಾರದ ಒಂದು ಹಳ್ಳದ ಉಂಗುರ ಅಂ. 03 ಗ್ರಾಂ. ಅಂ.ಕೀ. 10,000/- 4] ಬಂಗಾರದ ಕಿವಿಯ ಓಲೆ ನಾಲ್ಕು ಸೆಟ್‌ಗಳು ಅಂ. 10 ಗ್ರಾಂ. ಅಂ.ಕೀ. 35,000/- ಹೀಗೆ ಒಟ್ಟು ಬಂಗಾರದ ಆಭರಣಗಳು ಅಂ.ಕಿ. 1,45,000/- ಮೌಲ್ಯವು ಕಳುವು ಆಗಿರುತ್ತವೆ ಅಂತಾ ತಿಳಿಸಿದರು. ದಿನಾಂಕ: 06/11/2022 ರಂದು ರಾತ್ರಿ 9-00 ಗಂಟೆಯಿAದ ದಿನಾಂಕ: 07/11/2022 ರ ಬೆಳಿಗ್ಗೆ 6-30 ಗಂಟೆಯ ಮಧ್ಯದಲ್ಲಿ ಯಾರೋ ಕಳ್ಳರು ಮನೆಯ ಬೀಗ ಮುರಿದು ಮನೆಯಲ್ಲಿಟ್ಟಿದ್ದ ಮೇಲ್ಕಂಡ ಆಭರಣಗಳು ಕಳುವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

## ಗಾಂಧಿಗಂಜ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 168/2022 ಕಲಂ 454, 457, 380 ಐಪಿಸಿ :-

ದಿನಾಂಕ 07/11/2022 ರಂದು 1900 ಗಂಟೆಗೆ ಫಿರ್ಯಾದಿ ಶ್ರೀಮತಿ ಶಾರದಾಬಾಯಿ ಗಂಡ ರಾಜಕುಮಾರ ಹಜ್ಜರಗಿಕರ್ ವಯಸ್ಸು: 60 ವರ್ಷ ಜಾತಿ: ಲಿಂಗಾಯತ ಉ: ಮನೆ ಕೆಲಸ ಸಾ: ಮನೆ ಸಂ.12-3-151/07 ಗುಮ್ಮೆ ಕಾಲೋನಿ ಬೀದರ ಇವರು ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಾಂಶವೆನೆAದರೆ ದಿನಾಂಕ: 04/11/2022 ರಂದು ಫಿರ್ಯಾದಿಯ ಪತಿ ಶ್ರೀ ರಾಜಕುಮಾರ ರವರು ಆಕಸ್ಮಿಕವಾಗಿ ಬಿದ್ದ ಪರಿಣಾಮ ಅವರ ಕಾಲು ಮುರಿದಿದ್ದರಿಂದ ಅದೇ ದಿವಸ ರಾತ್ರಿ 11-00 ಗಂಟೆ ವೇಳೆಯಲ್ಲಿ ಮನೆಗೆ ಬೀಗ ಹಾಕಿಕೊಂಡು ಚಿಕಿತ್ಸೆಗಾಗಿ ಹೈದ್ರಾಬಾದಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತಾ ಅವರೊಂದಿಗೆಯೇ ಆಸ್ಪತ್ರೆಯಲ್ಲಿ ಉಳಿದಿರುತ್ತಾರೆ ಹೀಗಿರುವಲ್ಲಿ ಯಾರೋ ಅಪರಿಚಿತ ಕಳ್ಳರು ದಿನಾಂಕ: 04/11/2022 ರಂದು ರಾತ್ರಿ 11-00 ಗಂಟೆಯಿAದ ದಿನಾಂಕ: 07/11/2022 ರ ಮಧ್ಯದ ಅವಧಿಯಲ್ಲಿ ಮನೆಯ ಬೀಗ ಮುರಿದು ಲಾಕರ್ ದಲ್ಲಿ ಇಟ್ಟಿದ್ದ 1] ಬಂಗಾರದ ಗಂಟನ್ ಅಂ. 22 ಗ್ರಾಂ. ಅಂ.ಕೀ. 66,000/-ರೂ. 2] ಬಂಗಾರದ ನಾನ್ ಅಂ. 15 ಗ್ರಾಂ. ಅಂ.ಕೀ. 45,000/-ರೂ. 3] ಬಂಗಾರದ ಕಿವಿಯ ಓಲೆ ಅಂ. 05 ಗ್ರಾಂ. ಅಂ.ಕೀ. 15,000/- 4] ಬಂಗಾರದ ಉಂಗುರ ಅಂ. 05 ಗ್ರಾಂ. ಅಂ.ಕೀ. 15,000/- 5] ಬಂಗಾರದ ನಾಲ್ಕು ಮಕ್ಕಳ ಉಂಗುರಗಳು ಅಂ. 02 ಗ್ರಾಂ. ಅಂ.ಕೀ. 6,000/- ಹೀಗೆ ಒಟ್ಟು ಅಂ.ಕೀ. 1,47,000/-ರೂ. ಮೌಲ್ಯದ ಬಂಗಾರದ ಆಭರಣಗಳು ಕಳುವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

## ಬೀದರ ಗ್ರಾಮೀಣ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 66/2022 ಕಲಂ 392 ಐಪಿಸಿ :-

**ದಿನಾಂಕ 07/11/2022 ರಂದು ಸಾಯಾಂಕಾಲ 1915 ಗಂಟೆಗೆ ಸುಗಂಧ ಗಂಡ ನೇಲ್ಸನ್ ವಯ- 32 ಜಾ|| ಕ್ರಿಶ್ಚಿಯನ್ ಉ|| ಸರ್ಸಿಂಗ್ ಆಫೀಸರ್ ಸಾ|| ಮಂಗಲಪೇಠ ಬೆತಲೆಮ್ ಕಾಲೋನಿ ಬೀದರ ರವರು ಠಾಣೆಗೆ ಹಾಜರಾಗಿ ತನ್ನ ಹೇಳಿಕೆ ಕೊಟ್ಟಿದ್ದು ಸಾರಾಂಶವೆನೆಂದರೆ. ಫಿರ್ಯಾದಿಯು ಕಮಠಾಣಾ ಪ್ರಾಥಮಿಕ**

**ಆರೋಗ್ಯ ಕೇಂದ್ರದಲ್ಲಿ ನರ್ಸಿಂಗ್ ಆಸರ್ ಅಂತ ಕೆಲಸ ಮಾಡಿಕೊಂಡಿದ್ದು , ಸದ್ಯ ಹೆಚ್ಚಿನ ವ್ಯಾಸಂಗ ಕುರಿತು ಗುಲಬರ್ಗಾ ನರಸಿಂಗ ಕಾಲೇಜನಲ್ಲಿ ವಿದ್ಯಾಭ್ಯಾಸ ಮಾಡುತಿದ್ದು ದಿನಾಂಕ 07/11/2022 ರಂದು ಸಾಯಾಂಕಾಲ 4.45 ಗಂಟೆಗೆ ಕೋಳಾರದಿಂದ ಸ್ಕೂಟಿ ನೇಧರ ಮೇಲೆ ಕುಳೀತು ಬೀದರ ಕಡೆಗೆ ಬರುತಿದ್ದಾಗ ಬೆಳ್ಳೂರಾ ಹತ್ತಿರ ಇರುವ ಹಮಾಲ ಕಾಲೋನಿ ಹತ್ತಿರ ಹಿಂದಿನಿಂದ ಒಂದು ಪಲ್ಸರ ಮೋಟಾರ ಸೈಕಲ ಮೆಲೆ ಇಬ್ಬರು ವ್ಯಕ್ತಿಗಳು ಬಂದು ಮೆಡಂ ಅಂತ ಕರೆದಾಗ ಫಿರ್ಯಾದಿಯು ಹಿಂದೆ ತಿರುಗಿ ನೋಡಲಾಗಿ ಮೋಟಾರ ಸೈಕಲ ಮೇಲೆ ಹಿಂದೆ ಕುಳಿತ ವ್ಯಕ್ತಿ ಕೋರಳಿಗೆ ಕೈ ಹಾಕಿದಾಗ ಆಯತಪ್ಪಿ ಕೇಳಗೆ ಬಿದ್ದಾಗ ಹಿಂದೆ ಕುಳಿತ ವ್ಯಕ್ತಿ ಕೊರಳಲ್ಲಿ ಇದ್ದ ಒಂದುವರೆ ತೋಲಿ ಬಂಗಾರದ ತಾಳಿ ಅಂ.ಕೀ. 70,000/- ನೇದನ್ನು ಕಸಿದುಕೊಂಡು ಹೋದರು. ಸದರಿಯವರು ನೋಡಲು ಗೊಧಿ ಬಣ್ಣ, ಸಾದಾರಣ ಮೈಕಟ್ಟು ಹೊಂದಿದ್ದು ಸುಮಾರು 5.5 ಫಿಟ ಎತ್ತರ ವುಳ್ಳವರು ಇದ್ದು , ಸುಮಾರು ವಯಸ್ಸು 28-30 ಇರಬಹುದು. ಟಿ ಶರ್ಟ ಮತ್ತು ಜೀನ್ ಪ್ಯಾಂಟ ಧರಿಸಿರುತ್ತರಾರೆ ನೋಡಿದರೆ ಅವರಿಗೆ ನಾನು ಗುರುತಿಸುತ್ತೇನೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.**

ಹುಮನಾಬಾದ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 161/2022 ಕಲಂ 78(3) ಕೆಪಿ ಕಾಯ್ದೆ ;-

ದಿನಾಂಕ 07/11/2022 ರಂದು ಸಾಯಂಕಾಲ 1430 ಗಂಟೆಗೆ ಪಿಎಸ್.ಐ. ರವರು ಖಚಿತ ಮಾಹಿತಿ ಮೇರೆಗೆ ಹುಮನಾಬಾದ ಶ್ರೀ ವೀರಭದ್ರೇಶ್ವರ ಅಗ್ನಿ ಕುಂಡದ ಪಕ್ಕದಲ್ಲಿ ಹೋಗಿ ಜೀಪ ನಿಲ್ಲಿಸಿ ಎಲ್ಲರು ಜೀಪನಿಂದ ಇಳಿದು ಎಲ್ಲರು ಮರೆಯಾಗಿ ಹೊಗಿ ನೋಡಲು ಒಬ್ಬ ವ್ಯಕ್ತಿ ಸಾರ್ವಜನಿಕರಿಗೆ ಕೂಗುತ್ತಾ ಮಟಕಾ ಎಂಬ ನಸೀಬಿನ ಜೂಜಾಟದ ನಂಬರ ಬರೆಯಿಸಿರಿ ಒಂದು ರೂಪಾಯಿಗೆ 80 ರೂಪಾಯಿ ಪಡೆಯಿರಿ ಅಂತ ಕೂಗುತ್ತಾ ಸಾರ್ವಜನಿಕರಿಂದ ಹಣ ಪಡೆದುಕೊಂಡು ಕಾಗದದ ಮೇಲೆ ನಂಬರ ಬರೆದುಕೊಳ್ಳುತ್ತಿರುವುದನ್ನು ಕಂಡು ದಾಳಿ ಮಾಡಿ ಮಟಕಾ ಚೀಟಿ ಬರೆದುಕೊಳ್ಳುತ್ತಿದ್ದ ವ್ಯಕ್ತಿಗೆ ಹಿಡಿದುಕೊಂಡು ಅವನ ಹೆಸರು ಮತ್ತು ವಿಳಾಸ ವಿಚಾರಿಸಲು ಅವನು ತನ್ನ ಹೆಸರು ಬಾಬುರಾವ ತಂದೆ ಬಂಡಯ್ಯಾ ಪತ್ರಿ ವಯ 63 ವರ್ಷ ಜಾತಿ ಸ್ವಾಮಿ ಸಾ// ಜೇರಪೆಟ ಹುಮನಾಬಾದ ಅಂತ ತಿಳಿಸಿದನು. ಪಂಚರ ಸಮಕ್ಷಮದಲ್ಲಿ ಅವನಿಗೆ ವಿಚಾರಿಸಲು ತಾನು ಇಲ್ಲಿ ಸಾರ್ವಜನಿಕರಿಗೆ ಮಟಕಾ ಎಂಬ ನಸೀಬಿನ ಜೂಜಾಟದ ನಂಬರ ಬರೆಯಿಸಿ 1 ರೂಪಾಯಿಗೆ 80 ರೂಪಾಯಿ ಪಡೆದುಕೊಳ್ಳಿರಿ ಅಂತ ಹೇಳಿ ಸಾರ್ವಜನಿಕರಿಂದ ಹಣ ಪಡೆದುಕೊಂಡು ಮಟಕಾದ ನಸೀಬಿನ ನಂಬರಗಳು ಬರೆದುಕೊಳ್ಳುತ್ತಿರುವುದಾಗಿ ಒಪ್ಪಿಕೊಂಡಿರುತ್ತಾನೆ. ನಂತರ ಪಂಚರ ಸಮಕ್ಷಮದಲ್ಲಿ ಅವನ ಅಂಗ ಜಡ್ತಿ ಮಾಡಿದ್ದಾಗ ಅವನ ಹತ್ತಿರ ಮಟಕಾ ಜೂಜಾಟಕಕ್ಕೆ ಸಂಬAಧಿಸಿದ 1) ಒಂದು ಬಾಲ್ ಪೆನ್ 2) 10 ಸಣ್ಣ ಮಟಕಾ ಚೀಟಿಗಳು ಮತ್ತು 3) 200 ರೂಪಾಯಿ ಮುಖ ಬೆಲೆಯ 5 ನೋಟುಗಳು 1,000/- ರೂಪಾಯಿ, 100 ರೂಪಾಯಿ ಮುಖ ಬೆಲೆಯ 5 ನೋಟುಗಳು 500/- ರೂಪಾಯಿ, 50 ರೂಪಾಯಿ ಮುಖ ಬೆಲೆಯ 4 ನೋಟು 200/- ರೂಪಾಯಿ, ಹೀಗೆ ಒಟ್ಟು 1,700/- ರೂಪಾಯಿ ನಗದು ಹಣ ಸಿಕ್ಕಿದ್ದು, ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ಹಳ್ಳಿಖೇಡ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 106/2022 ಕಲಂ 392 ಐಪಿಸಿ :-

ದಿನಾಂಕ: 07/11/2022 ರಂದು 21:00 ಗಂಟೆಗೆ ಫಿರ್ಯಾದಿ ಸವಿತ ಗಂಡ ದಿಲೀಪಕುಮಾರ ಪಾಚಂಗೆ ಸಾ// ಹಳ್ಳಿಖೇಡ (ಬಿ) ರವರು ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಂಶವೇನೆAದರೆ, ದಿನಾಂಕ 07/11/2022 ರಂದು ಸಾಯಂಕಾಲ 5:00 ಗಂಟೆಗೆ ಮನೆಯಿಂದ ಬಟ್ಟೆ ಅಂಗಡಿಗೆ ಹೋಗಿ ಸ್ವಲ್ಪ ಹೊತ್ತು ಬಟ್ಟೆ ಅಂಗಡಿಯಲ್ಲಿ ಕುಳಿತುಕೊಂಡು ನಂತರ ಅಂಬೇಡ್ಕರ ಸರ್ಕಲ್‌ದಲ್ಲಿ ತರಕಾರಿ ಖರೀದಿ ಮಾಡಿಕೊಂಡು ಮರಳಿ ಮನೆಗೆ ನಡೆದುಕೊಂಡು ಹಿಲಾಪೂರ ರೋಡಿನ ದಸ್ತಗಿರ ರವರ ತರಕಾರಿ ಅಂಗಡಿಯ ಎದುರುಗಡೆ ಹೊಗುವಾಗ ದಿನಾಂಕ 07/11/222 ರಂದು ಸಾಯಂಕಾಲ 7:20 ಗಂಟೆ ಸುಮಾರಿಗೆ ಹಿಂದಿನಿAದ ಅಂದರೆ ಬಸವೇಶ್ವರ ಸರ್ಕಲ್ ಕಡೆಯಿಂದ ಯಾರೋ ಇಬ್ಬರು ಅಪರಿಚಿತರು ಪಲ್ಸರ ಮೋಟಾರ ಸೈಕಲ ಮೇಲೆ ಬಂದು ಮೋಟಾರ ಸೈಕಲ ಮೇಲೆ ಹಿಂದೆ ಕುಳಿತ ವ್ಯಕ್ತಿ ಫಿರ್ಯಾದಿಯ ಕೊರಳಲ್ಲಿದ್ದ 4 ತೋಲಿ ಬಂಗಾರದ ಗಂಟನ್ ಕಡಿದುಕೊಂಡು, ಮೋಟಾರ ಸೈಕಲ ಮೇಲೆ ಹೋಗಿರುತ್ತಾರೆ. ಕೋರಳಲ್ಲಿದ್ದ 4 ತೊಲೆ ಬಂಗಾರ ಗಂಟನ್ ಅಂದಾಜು ಕಿಮ್ಮತ್ತು 2 ಲಕ್ಷ ನೇದ್ದು ಇರುತ್ತದೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.